ಒ ಎಸ್ ನಂ. **12/2012** ಡಿ ಡಬ್ಲ್ಯೂ-**3**

**ದಿನಾಂಕಃ 16.03.2021.ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.**

**ಪಾಟೀ ಸವಾಲುಃ- ಶ್ರೀ ಆರ್ ಎಲ್ ವಾದಿ ಪರ ವಕೀಲರಿಂದಃ**

ನಮ್ಮ ಊರಿಗೂ, ಕೆ. ಕಾಳೇನಹಳ್ಳಿ ಗ್ರಾಮಕ್ಕೂ ಸುಮಾರು 1 ಕಿ ಮೀಟರ್ ದೂರ ಇದೆ. ನೀವು ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಳಾಸದಲ್ಲಿ ವಾಸ ಇರುವುದನ್ನ ತೋರಿಸಲು ದಾಖಲೆ ನ್ಯಾಯಾಲಯಕ್ಕೆ ಕೊಟ್ಟಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನಾನು ಯಾರ ಪರವಾಗಿಯೂ ಸಾಕ್ಷಿ ಹೇಳಲು ಬಂದಿಲ್ಲ. ಸಾಕ್ಷಿ ಮುಂದುವರೆದು ಜವರೇಗೌಡನ ಪರವಾಗಿ ಸಾಕ್ಷಿ ಹೇಳಲು ಬಂದಿದ್ದೇನೆ. ಸಾಕ್ಷಿ ಹೇಳಲು ನ್ಯಾಯಾಲಯದಿಂದ ನಿಮಗೆ ನೋಟಿಸ್ ಏನೂ ಬಂದಿಲ್ಲ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಈ ದಿನ ಸಾಕ್ಷ್ಯ ನುಡಿಯಲು ಜವರೇಗೌಡರ ಮಗ ಲೊಕೇಶ ನಿಮ್ಮನ್ನ ನ್ಯಾಯಾಲಯಕ್ಕೆ ಕರೆತಂದಿದ್ದಾರೆ ಎಂದರೆ ಸರಿ. ಈ ದಿನ ನ್ಯಾಯಾಲಯದಲ್ಲಿ ವಾದಿ ಯಶೋದಮ್ಮನನ್ನ ನೋಡಿದ್ದೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ಇದಕ್ಕೂ ಮೊದಲು ಕೆ. ಕಾಳೇನಹಳ್ಳಿ ಗ್ರಾಮದಲ್ಲಾಗಲೀ ಅಥವಾ ನಿಮ್ಮ ಊರಿನಲ್ಲಾಗಲೀ ಯಶೋದಮ್ಮನನ್ನ ನೀವು ನೋಡಿಲ್ಲ ಎಂದರೆ ಸರಿ. ಯಶೋದಮ್ಮ ಯಾರು ಎಂದು ನನಗೆ ಗೊತ್ತೇ ಇಲ್ಲ. ಈದಾವೆಯನ್ನ ಯಾರೋ ಯಶೋದಮ್ಮ ಎನ್ನುವವರು ಜವರೇಗೌಡರ ವಿರುದ್ಧ ಹೂಡಿದ್ದಾರೆ ಎಂದು ಗೊತ್ತಾಯಿತು. ಜವರೇಗೌಡರು ಈಗಲೂ ಆರೋಗ್ಯವಾಗಿದ್ದಾರಾ ಎಂದರೆ ಸಾಕ್ಷಿ ಹೌದು ಎನ್ನುತ್ತಾರೆ. ಜವರೇಗೌಡ ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ವರ್ಷದಿಂದ ಸ್ವಾಧೀನದಲ್ಲಿ ಇದ್ದಾರೆ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿ ನನ್ನ ಸರ್ವೆ ನಂಬರ್ಃ 62/2, 62/3, 104 ಇದ್ದು ನನ್ನ ಜಮೀನಿನ ಪಕ್ಕ ಜವರೇಗೌಡರ ಜಮೀನು ಇದೆ ಎನ್ನುತ್ತಾರೆ. ಮೇಲೇ ಹೇಳಿದ ಸರ್ವೆ ನಂಬರ್ ಗಳಲ್ಲಿ ನಿಮ್ಮ ಜಮೀನು ಇದೆ ಎಂದು ತೋರಿಸಲು ಆರ್ ಟಿ ಸಿ ಗಳನ್ನ ನ್ಯಾಯಾಯಕ್ಕೆ ಕೊಡುತ್ತೀರಾ ಎಂದರೆ ಸಾಕ್ಷಿ ಇಲ್ಲ ಎನ್ನುತ್ತಾರೆ. ನೀವು ಹೇಳುವ ಸರ್ವೆ ನಂಬರ್ ನಲ್ಲಿ ನಿಮ್ಮ ಜಮೀನು ಇಲ್ಲ ಆದರು ಕೂಡ ಸುಳ್ಳು ಸಾಕ್ಷಿ ಹೇಳುತ್ತಿದ್ದಿರಿ ಎಂದರೆ ಸರಿಯಲ್ಲ. ಸರ್ವೆ ನಂಬರ್ಃ

OS 12/2012
DW-3

62/1 ನಾನು ಕೊಂಡಿರುವ ಜಮೀನು ಆಗಿದ್ದು  ಸರ್ವೆ ನಂಬರ್ಃ 62/2, 62/3 ಮತ್ತು 62/4 ನನ್ನ ತಾತ ಕೊಂಡಿರುವ ಸ್ವತ್ತಾಗಿರುತ್ತದೆ. ಆ  ಸರ್ವೆ ನಂಬರ್ ಗಳು ಗೋಮಾಳದ ಜಾಗ ಆಗಿದ್ದು ನೀವು ಕೊೂಂಡಿರುವ ಜಮಿನುಗಳು ಅಲ್ಲಾ ಎಂದರೆ ಸರಿಯಲ್ಲ.

ಒ ಎಸ್ 257/2002 ರಲ್ಲಿ ಜವರೇಗೌಡರ ಪರವಾಗಿ ನೀವು ಸಾಕ್ಷ್ಯ ನುಡಿದಿದ್ದೀರಿ ಎಂದರೆ ಸರಿಯಲ್ಲ. ನಿಮ್ಮ ತಮ್ಮನ ಹೆಸರು ಕಾಳೇಗೌಡ ಎಂದರೆ ಸರಿ. ಕಾಳೇಗೌಡರು  ಒ ಎಸ್ 257/2002 ರಲ್ಲಿ ಯಶೋದಮ್ಮನ ಪರವಾಗಿ  ಸಾಕ್ಷ್ಯ ನುಡಿದಿದ್ದಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಮ್ಮ  ಮತ್ತು ನಿಮ್ಮ ತಮ್ಮನ ವಿರುದ್ದ ನಿಮ್ಮ ಚಿಕ್ಕಪ್ಪನ ಮಕ್ಕಳು ಕ್ರಿಮಿನಲ್  ನ್ಯಾಯಾಲಯ ಚನ್ನರಾಯಪಟ್ಟಣ  ದಲ್ಲಿ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಸರಿಯಲ್ಲ ಎನ್ನುತ್ತಾರೆ. ಆ ಕ್ರಿಮಿನಲ್ ಪ್ರಕರಣದಲ್ಲಿ ಜವರೇಗೌಡರು ನಿಮಗೆ ಜಾಮೀನು ಕೊಟ್ಟಿದ್ದರು ಎಂದರೆ ಸರಿಯಲ್ಲ ಎನ್ನುತ್ತಾರೆ. ಆ ವಿಷಯವನ್ನ  ಒ ಎಸ್ 257/2002 ರಲ್ಲಿ ಸಾಕ್ಷ್ಯ ಹೇಳುವಾಗ ನೀವೇ ಒಪ್ಪಿಕೊಂಡಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ

ನನ್ನಃ ಉಃಲೇಃಕ್ಕೆಃ ಬೆರಳಚ್ಚು ಮಾಡಲಾಗಿದೆ

ಓ ಹೇ ಕೇ ಸರಿ ಇದೆ

ಹಿರಿಯ ಸಿವಿಲ್  ನ್ಯಾಯಾಧೀಶರು ಮತ್ತು

ಪ್ರದನ್ಯಾದಂ, ಚನ್ನರಾಯಪಟ್ಟಣ

OS 12/2012
DW-3

OS 12/2012
DW-3